2017 ಕ.ತೀ.ವ. 580

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ**

**ಇಮ್ರಾನ್‌ಖಾನ್ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ಸರ್ಕಾರ, ಅರಣ್ಯ ಇಲಾಖೆ, ದೇವನಹಳ್ಳಿ***

**ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಕ್ರಿಮಿನಲ್ ಅರ್ಜಿ.**

**ಉಚ್ಚ ನ್ಯಾಯಾಲಯವು ಅರ್ಜಿದಾರರಿಗೆ ಕ್ರಿಮಿನಲ್ ಪ್ರಕರಣವೊಂದರಲ್ಲಿ ನೀಡಿದ ಜಾಮೀನಿನಲ್ಲಿ ವಿಧಿಸಿದ ಷರತ್ತನ್ನು ಸಡಿಲಿಸುವಂತೆ ಕೋರಿ ಸದರಿ ಕ್ರಿಮಿನಲ್ ಅರ್ಜಿ.**

**ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 439(1)(ಬಿ)ರಡಿಯಲ್ಲಿ ಜಾಮೀನು ವಿಧಿಸಿದ ಷರತ್ತನ್ನು ಮಾರ್ಪಾಡು ಮಾಡಲು ಕೋರಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು, ಸದರಿ ಪ್ರಕರಣದಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಲಾಗಿದೆ.**

ಅರ್ಜಿದಾರರ ಪರ : ಶ್ರೀ ಎಚ್. ಮೋಹನ್‌ಕುಮಾರ್, ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ನಸ್ರುಲ್ಲಾ ಖಾನ್, ಎಚ್.ಸಿ.ಜಿ.ಪಿ.

**ಐ.ಎ. ಸಂಖ್ಯೆ 1/2016ರ ಮೇಲೆ ಆಜ್ಞೆ**

**ನ್ಯಾಯಮೂರ್ತಿ ಶ್ರೀ ಕೆ. ಎನ್. ಫಣೀಂದ್ರ :–**

ಈ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (ಇನ್ನು ಮುಂದೆ ಸಂಕ್ಷಿಪ್ತವಾಗಿ "ಸಿಆರ್‌ಪಿಸಿ" ಎಂದು ಕರೆಯಲಾಗಿದೆ) 439(1)(ಬಿ) ಪ್ರಕರಣದಡಿ,

* ಕ್ರಿಮಿನಲ್ ಅರ್ಜಿ ಸಂಖ್ಯೆ.: 4728/2015, ದಿನಾಂಕ: 10ನೇ ಜನವರಿ, 2017.

ದಿನಾಂಕ 30.7.2015ರ ಆದೇಶದಲ್ಲಿರುವಂತೆ ವಿಧಿಸಲಾದ ಜಾಮೀನು ಷರತ್ತು ಸಂಖ್ಯೆ 3ರ ವಿಸ್ತರಣೆಯನ್ನು ಅಥವಾ ಬದಿಗಿರಿಸುವುದನ್ನು ಕೋರಿ ವಿಲೆಯಾದ ಅರ್ಜಿಯಲ್ಲಿ ಸಲ್ಲಿಸಲಾಗಿದೆ.

2. ವನ್ಯಜೀವಿ ಸಂರಕ್ಷಣಾ ಅಧಿನಿಯಮದ 9, 11, 39, 48–ಎ, 49–ಬಿ, 49–ಸಿ ಮತ್ತು 51ನೇ ಪ್ರಕರಣಗಳಡಿ ಶಿಕ್ಷಾರ್ಹವಾದ ಅಪರಾಧಗಳಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ ದೇವನಹಳ್ಳಿ ರೇಂಜ್‌ನ, ಅರಣ್ಯ ಇಲಾಖೆಯ ಎಫ್‌ಒಸಿ ಸಂಖ್ಯೆ 4/2015ರ ಸಂಬಂಧದಲ್ಲಿ ಸಿಆರ್‌ಪಿಸಿ 439ನೇ ಪ್ರಕರಣದಡಿ ಅರ್ಜಿದಾರರು ಸಲ್ಲಿಸಿದ ಜಾಮೀನು ಅರ್ಜಿಯ ಗುಣಾವಗುಣಗಳ ಆಧಾರದ ಮೇಲೆ ಈ ನ್ಯಾಯಾಲಯವು ಆದೇಶವನ್ನು ಹೊರಡಿಸುವಾಗ, ಕೆಲವು ಷರತ್ತುಗಳನ್ನು, ನಿರ್ದಿಷ್ಟವಾಗಿ ಈ ಕೆಳಗೆ ಪರಿಗಣಿಸಲಾದ 3ನೇ ಷರತ್ತನ್ನು, ವಿಧಿಸಿದೆ.

> *“(3) ಅರ್ಜಿದಾರರು ತನಿಖೆ ಪೂರ್ಣಗೊಳ್ಳುವವರೆಗೆ ತಿಂಗಳಿಗೊಮ್ಮೆ ಎರಡನೇ ಶನಿವಾರದಂದು ಬೆಳಿಗ್ಗೆ 10.00 ಮತ್ತು ಸಂಜೆ 5.00ರ ನಡುವೆ ತಮ್ಮ ಹಾಜರಾತಿಯನ್ನು ಗುರುತಿಸತಕ್ಕದ್ದು.”*

3. ಅರ್ಜಿದಾರರ ಪರ ಮಾನ್ಯ ವಕೀಲರು ಸದರಿ ಷರತ್ತು ಅರ್ಜಿದಾರರಿಗೆ ಅನಾನುಕೂಲತೆಯನ್ನುಂಟು ಮಾಡುತ್ತಿದೆ. ಆದುದರಿಂದ ಅದನ್ನು ಸಡಿಲಿಸಬಹುದೆಂದು ನಿವೇದಿಸಿದ್ದಾರೆ.

4. “ಸಿಆರ್‌ಪಿಸಿ 439(1)(ಬಿ) ಪ್ರಕರಣದಡಿ ವಾದಕಾಲೀನ ಅರ್ಜಿಯು ವಿಲೆಯಾದ ವಿಷಯದಲ್ಲಿ ಸಮರ್ಥನೀಯವಾಗಿದೆಯೇ?” ಎಂಬ ಪ್ರಶ್ನೆಯನ್ನು ಈ ನ್ಯಾಯಾಲಯವು ಎತ್ತಿದೆ.

5. ಅಷ್ಟೇ ಅಲ್ಲದೆ, ಮಾನ್ಯ ವಕೀಲರು ತಾವು ಈ ಮುಂಚೆ ಕ್ರಿಮಿನಲ್ ಅರ್ಜಿ ಸಂಖ್ಯೆ 7568/2016ರಲ್ಲಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿರುತ್ತಾರೆ ಮತ್ತು ಈ ನ್ಯಾಯಾಲಯವು ಸಮರ್ಥನೀಯತೆಗೆ ಸಂಬಂಧಿಸಿದ ಕಚೇರಿ ಆಕ್ಷೇಪಣೆಗಳನ್ನು ಎತ್ತಿಹಿಡಿದಿದ್ದು, ಅರ್ಜಿಯು ಸಮರ್ಥನೀಯುವಾಗಿಲ್ಲವೆಂದು ವಜಾ ಮಾಡಿರುವುದರಿಂದಾಗಿ ಈ ಅರ್ಜಿಯನ್ನು ವಿಲೆಯಾದ ವ್ಯವಹರಣೆಗಳಲ್ಲಿ ಸಲ್ಲಿಸಲಾಗಿದೆ.

6. ಈ ಹಿಂದಿನ ಅರ್ಜಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ಮೇಲೆ ಮತ್ತು ಕ್ರಿಮಿನಲ್ ಅರ್ಜಿ ಸಂಖ್ಯೆ 7568/2016ರಲ್ಲಿ ಆದೇಶವನ್ನು ಹೊರಡಿಸಿದ ಮೇಲೆ, ನ್ಯಾಯಾಲಯವು ಹೊರಡಿಸಿದ ಆದೇಶದ ಮಾರ್ಪಾಡಿಗಾಗಿ ಹೊಸ ಕ್ರಿಮಿನಲ್ ಅರ್ಜಿಯು ಸಮರ್ಥನೀಯವಾಗಿಲ್ಲವೆಂಬ ಆಕ್ಷೇಪಣೆಯನ್ನು ಕಚೇರಿಯು ಎತ್ತಿದೆ. ಈ ನ್ಯಾಯಾಲಯವು ಅರ್ಜಿಯ ಸಮರ್ಥನೀಯತೆಗೆ ಅಥವಾ ಕಚೇರಿಯಿಂದ ಎತ್ತಲಾದ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಸವಿವರವಾಗಿ ಪರಿಗಣಿಸಿಲ್ಲ, ಆದರೆ ನ್ಯಾಯಾಲಯವು ತನ್ನ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸದೆ, ಅರ್ಜಿಯು ಸಮರ್ಥನೀಯವಾಗಿಲ್ಲವೆಂದು ಸುಮ್ಮನೆ ವಜಾಗೊಳಿಸಿದೆ.

7. ಸಿ.ಆರ್.ಪಿ.ಸಿ. 362(5)ನೇ ಪ್ರಕರಣದ ಉಪಬಂಧದ ಅನುಸಾರ ನ್ಯಾಯಾಲಯವು ತನ್ನ ತೀರ್ಪಿಗೆ ಸಹಿ ಹಾಕಿದ ನಂತರ ಅದನ್ನು ಬದಲಿಸುವ ಅಥವಾ ಪುನರವಲೋಕನ ಮಾಡುವ ಅಧಿಕಾರ ಹೊಂದಿಲ್ಲ. ತೀರ್ಪಿನ ಸ್ವರೂಪದಲ್ಲಿರುವ ಅಂತಿಮ ಆದೇಶಗಳಿಗೆ ಸಂಬಂಧಿಸಿ ಇದೇ ನಿಯಮ ಅನ್ವಯವಾಗುತ್ತದೆ. ನ್ಯಾಯಾಲಯವು ಪ್ರಕರಣದ ವಿಲೆ ಮಾಡಿ ತನ್ನ ತೀರ್ಪು ಅಥವಾ ಅಂತಿಮ ಆದೇಶಕ್ಕೆ ಸಹಿ ಹಾಕಿದ ನಂತರ, ಲಿಪಿಕ ದೋಷ ಅಥವಾ ಗಣಿತ ದೋಷವನ್ನು ಸರಿಪಡಿಸುವ ಹೊರತು ಅದನ್ನು ಬದಲಿಸತಕ್ಕದ್ದಲ್ಲ ಅಥವಾ ಪುನರವಲೋಕಿಸತಕ್ಕದ್ದಲ್ಲ.

ನ್ಯಾಯಾಲಯವು ತೀರ್ಪು ಅಥವಾ ಆದೇಶಕ್ಕೆ ಸಹಿ ಮಾಡಿದ ನಂತರ ಕಾರ್ಯಾಂತ ನಿವೃತ್ತವಾಗುತ್ತದೆ. ಸದರಿ ಆದೇಶವನ್ನು ಅಧಿಕಾರ ವ್ಯಾಪ್ತಿಯಿಲ್ಲದೆ ಹೊರಡಿಸಿದ್ದ ಪ್ರಕರಣಗಳಲ್ಲಿ ಅಥವಾ ಗುಣಾವಗುಣಗಳ ಆಧಾರದ ಮೇಲೆ ನ್ಯಾಯ ನಿರ್ಣಯ ಮಾಡದೆ ಹಾಜರಾಗಲು ತಪ್ಪಿದಲ್ಲಿ ಅಥವಾ ಲಿಪಿಕ ದೋಷವನ್ನು ಸರಿಪಡಿಸುವ ಸಂದರ್ಭಗಳಲ್ಲಿ ಹೊರತುಪಡಿಸಿ, ತನ್ನ ತೀರ್ಪನ್ನು ಪುನರವಲೋಕಿಸಲು ಅಥವಾ ತನ್ನ ಆದೇಶವನ್ನು ಮಾರ್ಪಾಡುಗೊಳಿಸಲು ಈ ಉಪಬಂಧವು ನ್ಯಾಯಾಲಯಕ್ಕೆ ಅಧಿಕಾರ ನೀಡುವುದಿಲ್ಲ. ಆದುದರಿಂದ, ಅದು ವಾದಕಾಲೀನ ಅರ್ಜಿಯ ಸಮರ್ಥನೀಯತೆಯನ್ನು ಪರಿಗಣಿಸಲು ಅಗತ್ಯಪಡಿಸುತ್ತದೆ. ನನ್ನ ಅಭಿಪ್ರಾಯದಲ್ಲಿ, ಈ ನ್ಯಾಯಾಲಯದಿಂದ ಆದೇಶವನ್ನು ಅದರಲ್ಲಿ ಮಂಡಿಸಲಾದ ಆಧಾರಗಳನ್ನು ಪರಿಗಣಿಸಿ, ಗುಣಾವಗುಣಗಳ ಆಧಾರದ ಮೇಲೆ ಹೊರಡಿಸಿದ್ದು, ನ್ಯಾಯಾಲಯವು ಆ ನಿರ್ದಿಷ್ಟವಾದ ಸಮಯದಲ್ಲಿ ಅತ್ಯಂತ ಹೆಚ್ಚು ಅಗತ್ಯವಿರುವ ಷರತ್ತುಗಳನ್ನು ವಿಧಿಸಿದೆ ಹಾಗೂ ತದನುಸಾರವಾಗಿ ಷರತ್ತುಗಳನ್ನು ವಿಧಿಸಿ, ಈ ನ್ಯಾಯಾಲಯವು ಜಾಮೀನು ಅರ್ಜಿಯನ್ನು ವಿಲೆ ಮಾಡಿದೆ. ಆದೇಶದಲ್ಲಿ ಲಿಪಿಕ ಅಥವಾ ಗಣಿತ ಸ್ವರೂಪದಲ್ಲದ ಯಾವುದೇ ಮಾರ್ಪಾಡು ಅಥವಾ ಬದಲಾವಣೆಯನ್ನು “ಸಿಆರ್‌ಪಿಸಿ” ಯ ಯಾವುದೇ ಉಪಬಂಧಗಳಡಿ ಅನುಮತಿಸಿರುವುದಿಲ್ಲ.

8. “ಸಿಆರ್‌ಪಿಸಿ”ಯ 362ನೇ ಪ್ರಕರಣವು ವಿಲೆಯಾದ ಅರ್ಜಿಯಲ್ಲಿ ಆದೇಶಗಳನ್ನು ಹೊರಡಿಸಲು ನ್ಯಾಯಾಲಯಕ್ಕೆ ಅಧಿಕಾರ ನೀಡುವ ಏಕೈಕ ಉಪಬಂಧವಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗುತ್ತದೆ:

> *“362. ಈ ಸಂಹಿತೆಯು ಅನ್ಯಥಾ ಉಪಬಂಧಿಸಿದುದನ್ನುಳಿದು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ, ನ್ಯಾಯಾಲಯವು, ಪ್ರಕರಣದ ವಿಲೆ ಮಾಡಿ, ತನ್ನ ತೀರ್ಪು ಅಥವಾ ಅಂತಿಮ ಆದೇಶಕ್ಕೆ ಸಹಿ ಮಾಡಿದಾಗ, ಲಿಪಿಕ ಅಥವಾ ಗಣಿತ ದೋಷವನ್ನು ಸರಿಪಡಿಸುವ ಹೊರತು,*

*ಅದನ್ನು ಬದಲಿಸತಕ್ಕದ್ದಲ್ಲ ಅಥವಾ ಪುನರವಲೋಕನ ಮಾಡತಕ್ಕದ್ದಲ್ಲ".*

9. "ಸಿಆರ್‌ಪಿಸಿ"ಯ 362ನೇ ಪ್ರಕರಣದಡಿಯಲ್ಲಿನ ಉಪಬಂಧವನ್ನು ಹೊರತುಪಡಿಸಿ, ಈ ನ್ಯಾಯಾಲಯವು ತನ್ನ ಮೊದಲಿನ ಆದೇಶವನ್ನು ಮಾರ್ಪಾಡುಗೊಳಿಸಲಾಗುವ, ಬದಲಿಸಲಾಗುವ ಅಥವಾ ಪುನರವಲೋಕಿಸಲಾಗುವ, ಸಿಆರ್‌ಪಿಸಿ ಅಡಿಯಲ್ಲಿನ ಯಾವುದೇ ಇತರ ಉಪಬಂಧವನ್ನು ಮಾನ್ಯ ವಕೀಲರು ನ್ಯಾಯಾಲಯದ ಗಮನಕ್ಕೆ ತಂದಿಲ್ಲ. ಆದುದರಿಂದ, ಈ ನಿರ್ದಿಷ್ಟ ಉಪಬಂಧದಡಿ ನೀಡದೆ ಇರುವುದನ್ನು, ಅಂಥ ಆದೇಶವನ್ನು ಹೊರಡಿಸುವ ಸಲುವಾಗಿ ನ್ಯಾಯಾಲಯವು ಮಾಡಲಾಗುವುದಿಲ್ಲ ಅಥವಾ ಸೃಷ್ಟಿಸಲಾಗುವುದಿಲ್ಲ. "ಸಿಆರ್‌ಪಿಸಿ"ಯ 362ನೇ ಪ್ರಕರಣವು, ಮುದ್ರಣ ದೋಷವನ್ನು ಸರಿಪಡಿಸಲು ಹೊರತುಪಡಿಸಿ, ನ್ಯಾಯಾಲಯಗಳನ್ನು ಅವು ತಮ್ಮ ತೀರ್ಪು ಅಥವಾ ಆದೇಶವನ್ನು ಬದಲಿಸುವುದರಿಂದ ಅಥವಾ ತಿದ್ದುವುದರಿಂದ ನಿಷೇಧಿಸುವ ನಿರ್ದಿಷ್ಟ ಉಪಬಂಧವಾಗಿದೆ. ನಿರ್ದಿಷ್ಟ ಉಪಬಂಧವು ನ್ಯಾಯಾಲಯವನ್ನು ಕೆಲವು ಕಾರ್ಯಗಳನ್ನು ಮಾಡುವುದರಿಂದ ನಿಷೇಧಿಸಿದಾಗ, ಸದರಿ ಉಪಬಂಧವು ಬಹಳ ಸ್ಪಷ್ಟವಾಗಿರುವ ಕಾರಣ, ಸಿಆರ್‌ಪಿಸಿ ಅಡಿಯಲ್ಲಿನ ಯಾವುದೇ ಇತರ ಉಪಬಂಧದ ಸಹಾಯದಿಂದ ಅಥವಾ ಉಪಬಂಧವನ್ನು ಬೇರೆ ಯಾವುದೋ ರೀತಿಯಲ್ಲಿ ಅರ್ಥೈಸುವ ಮೂಲಕ ಉಪಾಯವಾಗಿ ತಪ್ಪಿಸಿಕೊಳ್ಳಲಾಗದು. ಒಮ್ಮೆ ತೀರ್ಪು ಅಥವಾ ಆದೇಶವನ್ನು ವಿಲೇ ಮಾಡಿದರೆ ಮತ್ತು ಸಹಿ ಮಾಡಿದರೆ ನ್ಯಾಯಾಲಯವು ಕಾರ್ಯಾಂತ ನಿವೃತ್ತವಾಗುತ್ತದೆ ಎಂದು ಸದರಿ ಪ್ರಕರಣವು ಸ್ಪಷ್ಟವಾಗಿ ವಿಷದೀಕರಿಸುತ್ತದೆ.

10. 'ಸಿಆರ್‌ಪಿಸಿ'ಯ 439 (1) (ಬಿ) ಪ್ರಕರಣದೊಂದಿಗೆ ಓದಿಕೊಂಡು, 'ಸಿಆರ್‌ಪಿಸಿ'ಯ 482ನೇ ಪ್ರಕರಣದ ಅಂತರ್ನಿಹಿತ ಅಧಿಕಾರಗಳನ್ನು ಸಹ ಅನ್ವಯಿಸಿಕೊಳ್ಳಲಾಗದು. 'ಸಿಆರ್‌ಪಿಸಿ'ಯ 482ನೇ ಪ್ರಕರಣದಡಿ ಅಂತರ್ನಿಹಿತ ಅಧಿಕಾರಗಳನ್ನು ಪರ್ಯಾಯ ಪರಿಹಾರ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಬಳಸಲಾಗುವುದು ಅಥವಾ ನ್ಯಾಯಾಲಯದ ಮುಂದೆ ಪರಿಹಾರ ಕೋರಲು ಪಕ್ಷಕಾರನಿಗೆ ಸಾಧ್ಯಗೊಳಿಸುವ

ಬೇರಾವುದೇ ನಿರ್ದಿಷ್ಟ ಉಪಬಂಧವಿಲ್ಲ. 'ಸಿಆರ್‌ಪಿಸಿ'ಯ 439(1)(ಎ) ಪ್ರಕರಣಕ್ಕೆ ಸಂಬಂಧಿಸಿದಂತೆ 'ಸಿಆರ್‌ಪಿಸಿ'ಯ 439(1)(ಬಿ) ಪ್ರಕರಣವು ಒಂದು ಪರ್ಯಾಯವಾದ ಉಪಬಂಧವಾಗಿದೆ. ಇದು ಜಾಮೀನು ಆದೇಶದಲ್ಲಿ ಷರತ್ತಿನ ಮಾರ್ಪಾಟು ಅಥವಾ ಸಡಿಲಿಕೆಯನ್ನು ಕೋರಬಹುದಾದ ಬಾಧಿತ ವ್ಯಕ್ತಿಗೆ ನೀಡಲಾದ ಸ್ವತಂತ್ರ ಹಕ್ಕಾಗಿದೆ. ಆದುದರಿಂದ, ಸದರಿ ಉಪಬಂಧವು ಸ್ವತಂತ್ರವಾದುದಾಗಿದ್ದು, ವಿಧಿಸಲಾದ ಯಾವುವೇ ಷರತ್ತುಗಳ ಮಾರ್ಪಾಟು ಅಥವಾ ಸಡಿಲಿಕೆಗೆ ಅದನ್ನು ಕೋರಲಾಗುವ ಹಾಗೆ ಜಾಮೀನು ಅರ್ಜಿಯ ಮೇಲೆ, ಮೂಲ ಆದೇಶದಲ್ಲಿ ಅದನ್ನು ಓದಲಾಗುವುದಿಲ್ಲ.

11. ಅಲ್ಲದೆ, ನ್ಯಾಯಾಲಯದಿಂದ ವಿಧಿಸಲಾದ ಸದರಿ ಷರತ್ತಿನ ಸಡಿಲಿಕೆ ಅಥವಾ ಮಾರ್ಪಾಟಿಗಾಗಿ ಅರ್ಜಿದಾರರಿಗೆ ತರುವಾಯದ ವ್ಯಾಜ್ಯ ಕಾರಣವಾಗಿರುವ 3ನೇ ಷರತ್ತಿನ ಮಾರ್ಪಾಟಿಗಾಗಿ ಅರ್ಜಿದಾರರು ಈ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಆದುದರಿಂದ, ಅರ್ಜಿದಾರರು ಸದರಿ ಷರತ್ತಿನ ಸಡಿಲಿಕೆ ಅಥವಾ ಮಾರ್ಪಾಡಿಗೆ ಹಕ್ಕುಳ್ಳವರಾಗಿದ್ದಾರೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಅವರು ವಾದಿಸಿದ ಸನ್ನಿವೇಶಗಳಿಗೆ ನ್ಯಾಯಾಲಯವು ಸ್ವತಂತ್ರವಾಗಿ ತನ್ನ ವಿವೇಚನೆಯನ್ನು ಬಳಸಬೇಕಾಗುತ್ತದೆ. ಆದುದರಿಂದ, ಇನ್ನೊಂದು ಕಡೆಗೆ ಅವಕಾಶ ನೀಡಿದ ನಂತರ ನ್ಯಾಯಾಲಯವು ಸ್ವತಂತ್ರವಾಗಿ ತನ್ನ ವಿವೇಚನೆಯನ್ನು ಬಳಸಬೇಕಾಗುತ್ತದೆ ಮತ್ತು ಆ ನಂತರ 'ಸಿಆರ್‌ಪಿಸಿ'ಯ 439(1)(ಬಿ) ಪ್ರಕರಣದಡಿ ಅದು ಪ್ರತ್ಯೇಕ ಆದೇಶವನ್ನು ಹೊರಡಿಸಬೇಕಾಗುತ್ತದೆ. ಕಲ್ಪನೆಯ ವ್ಯಾಪ್ತಿಯಲ್ಲಿ, ಷರತ್ತಿನ ಅಂಥ ಮಾರ್ಪಾಟು ಅಥವಾ ಸಡಿಲಿಕೆಯು ತೀರ್ಪು/ಆದೇಶದಲ್ಲಿನ ಲಿಪಿಕ ದೋಷವನ್ನು ಸರಿಪಡಿಸುವುದಕ್ಕೆ ಮಾತ್ರ ಸಮಾನವಾಗುತ್ತದೆಯೆಂದು ಹೇಳಲಾಗದು. ಉಪಬಂಧವನ್ನು ಇನ್ಯಾವುದೇ ರೀತಿಯಲ್ಲಿ ಅರ್ಥೈಸಲಾಗದಿದ್ದಾಗ, ನನ್ನ ಅಭಿಪ್ರಾಯದಲ್ಲಿ, 'ಸಿಆರ್‌ಪಿಸಿ'ಯ 439(1)(ಬಿ) ಪ್ರಕರಣದಡಿ, ಈ ನ್ಯಾಯಾಲಯವು ಹೊರಡಿಸಿದ ಈ ಮೊದಲಿನ ಆದೇಶದಲ್ಲಿ ಯಾವುದೇ ಷರತ್ತಿನ ಮಾರ್ಪಾಡು/ವ್ಯತ್ಯಾಸ ಅಥವಾ ಸಡಿಲಿಕೆಗಾಗಿ ಅರ್ಜಿದಾರರು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

12. ಆದುದರಿಂದ, ಈ ನಿರ್ದಿಷ್ಟ ಅಂಶವನ್ನು ಈ ನ್ಯಾಯಾಲಯವು ಈ ಮೊದಲು ಸವಿವರವಾಗಿ ಪರಿಗಣಿಸಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದ್ದು, ಇದು ನಾನು ಇದನ್ನು ಪರಿಗಣಿಸುವಂತೆ ಮಾಡಿದೆ.

ತದನುಸಾರವಾಗಿ, ವಾದಕಾಲೀನ ಅರ್ಜಿ ಸಂಖ್ಯೆ 1/2017 ಈ ನ್ಯಾಯಾಲಯದ ಮುಂದೆ ಸಮರ್ಥನೀಯವಾಗಿಲ್ಲದಿರುವ ಕಾರಣ ಅದನ್ನು ವಜಾ ಮಾಡಲಾಗಿದೆ ಮತ್ತು ಅರ್ಜಿದಾರರಿಗೆ ಮತ್ತೆ ಹೊಸದಾಗಿ ಷರತ್ತಿನ ಸಡಿಲಿಕೆಗಾಗಿ ಅಗತ್ಯ ಅರ್ಜಿಯನ್ನು ಸಲ್ಲಿಸಲು ಸ್ವಾತಂತ್ರ್ಯ ನೀಡುವುದು ನ್ಯಾಯಸಮ್ಮತ ಹಾಗೂ ಅವಶ್ಯಕವಾಗಿದೆ.

---